

# ಎಂಥ ಸಾವ್ರೋ ಮಾರಾಯ್ರೆ ಒಂದೂ ಗೊತ್ತಿಲ್ಲ...

‘ಬುದ್ಧಿವಂತರ ಜಿಲ್ಲೆ’ ಮಂಗಳೂರಿನವರ ಆಡುಮಾತಿನಲ್ಲಿ ಆದರದೇ ಆದ ಚೆಂದವಿದೆ, ಸೌಗಂಧವಿದೆ. ಸುಂದರ ಕಡಲ ತೀರಗಳೊಂದಿಗೆ ನುಡಿಯಲ್ಲೂ ಸೊಗಸನ್ನು ಉಳಿಸಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯ ಭಾಷಾ ಪರಿಚಯ ಮಾಡಿದ್ದಾರೆ ಪ. ರಾಮಕೃಷ್ಣ ಶಾಸ್ತ್ರಿ

ಚರ್ಡಪ್ಪ ಕಾಮತರ ಹೋಟೆಲು ನಮ್ಮೂರಿಗೆ ಹೆಸರುವಾಸಿ. ಅವರ ಮಗಳನ್ನು ನೋಡಲು ವರ ಬರುತ್ತಾನೆಂದು ಸುದ್ದಿಯಾಗಿತ್ತು. ಚಾ ಕುಡಿಯಲು ಹೋದವರು, ಕಾಮತರೇ, ಮಗಳಿಗೆ ಮದುವೆ ಮಾಡ್ತಿದೀರಂತೆ. ಹುಡುಗ ಹೇಗಿದ್ದಾನೆ ನೋಡೋದಕ್ಕೆ?, ನಿಮ್ಮ ಹಾಗೆ ವ್ಯಾಪಾರವೋ ಅಲ್ಲ ಕೆಲಸದಲ್ಲಿದ್ದಾನೋ? ಹೀಗೆ ಯಾರು ಯಾವ ಪ್ರಶ್ನೆ ಕೇಳಿದರೂ ಕಾಮತರು, ಎಂತದ್ದು ಸಾವೋ ಮಾರಾಯ್ರೆ, ವ್ಯಾಪಾರ ಅಂತ ಹೇಳ್ತಿದಾನೆ. ಹೆಸ್ರು ನೆನ್ಪಿಗೆ ಬರ್ತಿಲ್ಲ. ಎಂತಾ ಕರ್ಮವೋ ಅಂತ ಇನ್ನು ನೋಡಿ ಆಗಬೇಕಷ್ಟೇ ಎನ್ನುತ್ತಾರೆ.

ಮದುವೆಯ ಶುಭ ಕಾರ್ಯದ ಪ್ರಸ್ತಾಪದಲ್ಲಿ ಸಾವು ಮತ್ತು ಕರ್ಮಗಳ ಹೆಸರು ಬರುವುದು ಉಳಿದೆಡೆ ಅಪಶಕುನ ಅನಿಸಬಹುದು. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಆಡುಮಾತಿನಲ್ಲಿ ಶುಭವಿರಲಿ, ಅಶುಭವಿರಲಿ, ‘ಎಂತದ್ದು ಸಾವೋ ಮಾರಾಯ್ರೇ’ ಅಂತ ಬರದಿದ್ದರೆ ಮಾತಿಗೆ ಶೋಭೆ ಬರುವುದೇ ಇಲ್ಲ.

ಹತ್ತಿಕರೆ ಅಡಿಕೆ ತೋಟ ಇರುವ ಮಾಬಲ ಭಟ್ಟನನ್ನು ಮಾತಾಡಿಸಿ. ಈ ಸಲ ಅಡಿಕೆ ಫಸಲು ಹೇಗುಂಟು ಭಟ್ರೇ? ಕೇಳಿದರೆ ಫಸಲೇನೋ ಭರ್ಜರಿ ಇತ್ತು ಎಂದು ಹೇಳುವಾಗಲೂ ಅವರ ಮುಖದಲ್ಲಿ ದುಗುಡ ಎದ್ದು ಕಾಣುತ್ತದೆ. ಹಾಗೆಂದು ಫಸಲು ಭರ್ಜರಿಯಾದುದಕ್ಕೆ ಅವರಿಗೆ ದುಃಖವಲ್ಲ. ತೋಟಕ್ಕೆ ಮದ್ದು ಬಿಡುವ ಆ ಮೂರು ಕಾಸಿನವ ಬಾಬು ನಾಯ್ಕ ಇದ್ದಾನಲ್ಲ, ಈಗ ಬರ್ತೇನೆ ಭಟ್ರೇ ಅಂತ ಹೇಳಿ ಕೈ ಕೊಟ್ಟುಬಿಟ್ಟ. ಅವನು ಬರ್ತಾನೆ